# ಕರ್ನಾಟಕ ವಿಧಾನ ಪರಿಷತ್

| | |
|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 370 |
| 2) ಸದಸ್ಯರ ಹೆಸರು | ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ) |
| 3) ಉತ್ತರಿಸುವ ದಿನಾಂಕ | 29.01.2026 |
| 4) ಉತ್ತರಿಸುವವರು | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 10 ವರ್ಷಗಳ ರಾಜ್ಯದ ತಲಾವಾರು ಆದಾಯ ಎಷ್ಟು; ತಲಾವಾರು ಆದಾಯವನ್ನು ಪರಿಗಣಿಸಲು ಇರುವ ಮಾನದಂಡಗಳೇನು; (ವಿವರವನ್ನು ವರ್ಷವಾರು ನೀಡುವುದು)</td><td>ಕಳೆದ 10 ವರ್ಷಗಳ ರಾಜ್ಯದ ತಲಾದಾಯದ ವಿವರಗಳು ಕೆಳಕಂಡಂತಿದೆ<br>ರೂ.ಗಳಲ್ಲಿ
<table>
<tr><th>ವರ್ಷ</th><th>ತಲಾದಾಯ</th></tr>
<tr><td>2015-16</td><td>1,48,108</td></tr>
<tr><td>2016-17</td><td>1,69,898</td></tr>
<tr><td>2017-18</td><td>1,85,840</td></tr>
<tr><td>2018-19</td><td>2,05,245</td></tr>
<tr><td>2019-20</td><td>2,22,141</td></tr>
<tr><td>2020-21</td><td>2,21,683</td></tr>
<tr><td>2021-22</td><td>2,68,963</td></tr>
<tr><td>2022-23</td><td>3,10,325</td></tr>
<tr><td>2023-24</td><td>3,39,813</td></tr>
<tr><td>2024-25</td><td>3,80,906</td></tr>
</table>
ಮಾಹಿತಿ: ಕೇಂದ್ರ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯ (MoSPI).<br><br>ರಾಜ್ಯದ ತಲಾವಾರು ಆದಾಯವನ್ನು, ಪ್ರಸಕ್ತ ಬೆಲೆಗಳಲ್ಲಿ ಅಂದಾಜಿಸಲಾದ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನವನ್ನು ಸಂಬಂಧಿತ ಆರ್ಥಿಕ ವರ್ಷದ ಅಕ್ಟೋಬರ್ 1 ರಂದು ಅಂದಾಜಿಸಲಾದ ಜನಸಂಖ್ಯೆಯಿಂದ ಭಾಗಿಸುವ ಮೂಲಕ ಲೆಕ್ಕ ಹಾಕಲಾಗುತ್ತದೆ.</td></tr>
<tr><td>ಆ)</td><td>2023-24 ಮತ್ತು 2024-25ರ ಆಯವ್ಯಯದಲ್ಲಿ ಸರ್ಕಾರ ನಿರೀಕ್ಷಿಸಿದ್ದ ತೆರಿಗೆ ಸಂಗ್ರಹ ಗುರಿ ಎಷ್ಟು; ಆಗಿರುವ ತೆರಿಗೆ ಸಂಗ್ರಹ ಎಷ್ಟು; (ವರ್ಷವಾರು ಇಲಾಖಾವಾರು ವಿವರ ನೀಡುವುದು);</td><td>ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>2025-26ನೇ ಸಾಲಿನಲ್ಲಿ ಸರ್ಕಾರ ನಿರೀಕ್ಷಿಸಿದ್ದ ತೆರಿಗೆ ಸಂಗ್ರಹ ಎಷ್ಟು; 2025, ಡಿಸಂಬರ್ ಅಂತ್ಯಕ್ಕೆ ಆಗಿರುವ ತೆರಿಗೆ ಸಂಗ್ರಹ ಎಷ್ಟು; (ಇಲಾಖಾವಾರು ವಿವರ ನೀಡುವುದು);</td><td>ಅನುಬಂಧ-2 ರಲ್ಲಿ ನೀಡಲಾಗಿದೆ.</td></tr>
<tr><td>ಈ)</td><td>ತೆರಿಗೆ ಸಂಗ್ರಹ ಕುಂಠಿತಗೊಳ್ಳಲು ಕಾರಣಗಳೇನು</td><td>ಪ್ರಸಕ್ತ ಸಾಲಿನಲ್ಲಿ ರಾಜ್ಯದ ತೆರಿಗೆ ಸಂಗ್ರಹಣೆಯು ಆಯವ್ಯಯ ಗುರಿಗಿಂತ ಕಡಿಮೆ ಸ್ವೀಕೃತವಾಗಿರುತ್ತದೆ. ಇದಕ್ಕೆ ದೇಶದ ಒಟ್ಟಾರೆ ಆರ್ಥಿಕ ಪರಿಸ್ಥಿತಿ ಮತ್ತು ಕೇಂದ್ರ ಸರ್ಕಾರದ ತೆರಿಗೆ ನೀತಿಗಳು ಪ್ರಮುಖ ಕಾರಣವಾಗಿದೆ.</td></tr>
</table>

| | | |
|---|---|---|
| | | 2025-26 ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯ ಅಂದಾಜುಗಳಿಗೆ ಹೋಲಿಸಿದರೆ, ಪರಿಷ್ಕೃತ ಅಂದಾಜುಗಳಲ್ಲಿ ಜಿ.ಎಸ್.ಟಿ ಸಂಗ್ರಹಣೆಯು ಶೇ.11 ರಷ್ಟು ಇಳಿಕೆಯಾಗಿದೆ. ಒಟ್ಟು ತೆರಿಗೆ ಸ್ವೀಕೃತಿಗಳಲ್ಲಿ ಶೇ.4.5ರಷ್ಟು ಕಡಿಮೆಯಾಗಿರುತ್ತದೆ.<br><br>ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜಿ.ಎಸ್.ಟಿ ಯಿಂದ ರಾಜ್ಯದ ತೆರಿಗೆ ಬೆಳವಣಿಗೆಯು ಕಡಿಮೆಯಾಗಿರುತ್ತದೆ. ಕೇಂದ್ರ ಸರ್ಕಾರ 2023-24ರಿಂದ ಜಿ.ಎಸ್.ಟಿ ಪರಿಹಾರ ಸ್ಥಗಿತಗೊಳಿಸಿದ್ದರಿಂದ, ರಾಜಸ್ವ ಸಂಗ್ರಹಣೆ ಕಡಿಮೆಯಾಗಿರುತ್ತದೆ. 15ನೇ ಹಣಕಾಸು ಆಯೋಗದ ಶಿಫಾರಸ್ಸಿನಿಂದ ರಾಜ್ಯದ ತೆರಿಗೆ ಹಂಚಿಕೆ ಕಡಿಮೆಯಾಗಿರುತ್ತದೆ.<br><br>ಅಲ್ಲದೆ, ಕೇಂದ್ರ ಸರ್ಕಾರವು ಅನಿರೀಕ್ಷಿತವಾಗಿ ಜಿ.ಎಸ್.ಟಿ ದರ ತರ್ಕಬದ್ಧಗೊಳಿಸಿದ ಕಾರಣ ರಾಜ್ಯದ ರಾಜಸ್ವ ಸಂಗ್ರಹಣೆಯು ಮತ್ತಷ್ಟು ಇಳಿಕೆಯಾಗಿದೆ. 2025-26ನೇ ಸಾಲಿನಲ್ಲಿ ಜಿ.ಎಸ್.ಟಿ ತರ್ಕಬದ್ಧಗೊಳಿಸುವಿಕೆಗೂ ಮುನ್ನ, ರಾಜ್ಯದ ಸರಾಸರಿ ಮಾಸಿಕ ಜಿ.ಎಸ್.ಟಿ ರಾಜಸ್ವ ಸಂಗ್ರಹಣೆಯು ಶೇ.10ರಷ್ಟು ಬೆಳವಣಿಗೆಯನ್ನು ದಾಖಲಿಸಿತ್ತು. ಆದರೆ ದರ ತರ್ಕಬದ್ಧಗೊಳಿಸುವಿಕೆಯ ನಂತರ, ಜಿ.ಎಸ್.ಟಿ ಸಂಗ್ರಹಣೆಯ ಮಾಸಿಕ ಬೆಳವಣಿಗೆಯು ಶೇ.4ಕ್ಕೆ ಕಡಿಮೆಯಾಗಿದೆ. ಪ್ರಸ್ತಾವಿತ ದರ ಪರಿಷ್ಕರಣೆಯಿಂದ ಪ್ರಸಕ್ತ ಸಾಲಿಗೆ ರಾಜ್ಯದ ಜಿ.ಎಸ್.ಟಿ ಸಂಗ್ರಹಣೆಯು ಅಂದಾಜು 10,000 ಕೋಟಿ ರೂ.ಗಳು ಕೊರತೆ ಉಂಟಾಗಿದೆ.<br><br>ತೆರಿಗೆ ಸಂಗ್ರಹಣೆಯಲ್ಲಿ ಉಂಟಾಗಿರುವ ನಷ್ಟವನ್ನು ಮನಗಂಡು ರಾಜ್ಯ ಸರ್ಕಾರವು ಸಂಪನ್ಮೂಲ ಕ್ರೋಢೀಕರಣ ಕ್ರಮಗಳನ್ನು ಕೈಗೊಂಡಿರುತ್ತದೆ. |
| ಊ) | 2025-26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಎಲ್ಲಾ ಇಲಾಖೆ/ನಿಗಮ ಮಂಡಳಿಗಳಿಗೆ ಬಿಡುಗಡೆ ಮಾಡಿರುವ ಮತ್ತು ಬಿಡುಗಡೆ ಮಾಡಲು ಬಾಕಿ ಇರುವ ಅನುದಾನ ಎಷ್ಟು; (ಇಲಾಖಾವಾರು ವಿವರ ನೀಡುವುದು) ಬಿಡುಗಡೆಗೆ ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? | 2025-26ನೇ ಸಾಲಿಗೆ ಆರ್ಥಿಕ ಇಲಾಖೆಯು ಅಧಿಕಾರ ಪ್ರತ್ಯಾಯೋಜನೆಯ ಅನ್ವಯ ಆಡಳಿತ ಇಲಾಖೆಗಳಿಗೆ ಅನುದಾನ ಬಿಡುಗಡೆ ಮಾಡಿರುತ್ತದೆ. 2025-26ನೇ ಸಾಲಿನಲ್ಲಿ ವಿವಿಧ ಇಲಾಖೆಗಳಡಿ ಈವರೆಗೂ ಆಗಿರುವ ವೆಚ್ಚದ ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.<br><br>ಇಲಾಖೆಗಳಿಗೆ ಈವರೆಗೂ ಬಿಡುಗಡೆ ಮಾಡಿರುವ ಅನುದಾನದ ಬಳಕೆ ಆಧಾರದ ಮೇಲೆ ಬಾಕಿಯಿರುವ ಅನುದಾನವನ್ನು ಬಿಡುಗಡೆಗೆ ಮಾಡಲು ಕ್ರಮವಹಿಸಲಾಗುವುದು. |

**ಸಂಖ್ಯೆ: FD/6/2026-DS-BR-FINANCE DEPT.SEC**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ-1

## ಸ್ವಂತ ತೆರಿಗೆ ರಾಜಸ್ವದ ವಿವರಗಳು 2023-24 & 2024-25

(ಕೋಟಿ ರೂ.ಗಳು)

| ಕ್ರ.ಸಂ | ತೆರಿಗೆ | 2023-24 ರ ಆಯವ್ಯಯ ಗುರಿ | 2023-24 ರ ಸಂಗ್ರಹಣೆ | 2024-25 ರ ಆಯವ್ಯಯ ಗುರಿ | 2024-25 ರ ಸಂಗ್ರಹಣೆ |
|---|---|---|---|---|---|
| 1 | ವಾಣಿಜ್ಯ ತೆರಿಗೆ | 98,650 | 93,197 | 1,10,000 | 1,02,431 |
| 2 | ಅಬಕಾರಿ | 36,000 | 34,629 | 38,525 | 35,784 |
| 3 | ಮುದ್ರಾಂಕ ಮತ್ತು ನೋಂದಣಿ ಶುಲ್ಕ. | 25,000 | 20,147 | 26,000 | 22,353 |
| 4 | ಮೋಟಾರು ವಾಹನ ತೆರಿಗೆ | 11,500 | 11,287 | 13,000 | 12,516 |
| 5 | ಇತರೆ | 2,153 | 4,245 | 2,368 | 4,363 |
| ಒಟ್ಟು ಸ್ವಂತ ತೆರಿಗೆ ರಾಜಸ್ವ | | **1,73,303** | **1,63,505** | **1,89,893** | **1,77,447** |

## ಅನುಬಂಧ-2

### ಸ್ವಂತ ತೆರಿಗೆ ರಾಜಸ್ವದ ವಿವರಗಳು 2025-26

(ಕೋಟಿ ರೂ.ಗಳು)

| ಕ್ರ.ಸಂ | ತೆರಿಗೆ | 2025-26 ರ ಆಯವ್ಯಯ | 2025-26 ರ ಡಿಸೆಂಬರ್ ಅಂತ್ಯಕ್ಕೆ ಸಂಗ್ರಹಣೆ |
|---|---|---|---|
| 1 | ವಾಣಿಜ್ಯ ತೆರಿಗೆ | 1,20,000 | 81,079 |
| 2 | ಅಬಕಾರಿ | 40,000 | 29,906 |
| 3 | ಮುದ್ರಾಂಕ ಮತ್ತು ನೋಂದಣಿ ಶುಲ್ಕ. | 28,000 | 18,169 |
| 4 | ಮೋಟಾರು ವಾಹನ ತೆರಿಗೆ | 15,000 | 9,352 |
| 5 | ಇತರೆ | 5,100 | 883 |
| ಒಟ್ಟು ಸ್ವಂತ ತೆರಿಗೆ ರಾಜಸ್ವ | | **2,08,100** | **1,39,389** |

## ಅನುಬಂಧ-3

**2025-26ನೇ ಸಾಲಿನ ಇಲಾಖಾವಾರು ವೆಚ್ಚದ ವಿವರಗಳು**

ರೂ.ಕೋಟಿಗಳಲ್ಲಿ

| ಇಲಾಖೆ | 2025-26ರ ಆಯವ್ಯಯ ಅಂದಾಜು | ದಿನಾಂಕ 09.03.26 ರವರೆಗಿನ ವೆಚ್ಚ |
|---|---|---|
| ಕೃಷಿ | 5,045 | 3,667 |
| ತೋಟಗಾರಿಕೆ | 1,532 | 1,172 |
| ರೇಷ್ಮೆ | 417 | 322 |
| ಪಶುಸಂಗೋಪನೆ | 3,342 | 3,237 |
| ಮೀನುಗಾರಿಕೆ | 421 | 259 |
| ಆರ್ಥಿಕ | 44,604 | 33,333 |
| ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ | 1,855 | 1,139 |
| ಇ - ಆಡಳಿತ | 113 | 88 |
| ಒಳಾಡಳಿತ | 13,045 | 11,140 |
| ಸಾರಿಗೆ | 7,380 | 5,372 |
| ಮೂಲಭೂತ ಸೌಕರ್ಯ | 1,033 | 863 |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 25,440 | 13,167 |
| ಅರಣ್ಯ | 2,291 | 2,106 |
| ಪರಿಸರ ಮತ್ತು ಜೀವಿಶಾಸ್ತ್ರ | 19 | 10 |
| ಸಹಕಾರ | 2,390 | 1,729 |
| ಪರಿಶಿಷ್ಟ ಜಾತಿಗಳ ಕಲ್ಯಾಣ | 6,022 | 4,261 |
| ಪರಿಶಿಷ್ಟ ಪಂಗಡಗಳ ಕಲ್ಯಾಣ | 2,081 | 1,396 |
| ಹಿಂದುಳಿದ ವರ್ಗಗಳ ಕಲ್ಯಾಣ | 4,014 | 3,389 |
| ಅಲ್ಪಸಂಖ್ಯಾತರ ಕಲ್ಯಾಣ | 4,515 | 2,791 |

| ಇಲಾಖೆ | 2025-26ರ ಆಯವ್ಯಯ ಅಂದಾಜು | ದಿನಾಂಕ 09.03.26 ರವರೆಗಿನ ವೆಚ್ಚ |
|---|---|---|
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 34,184 | 22,150 |
| ವಾರ್ತಾ | 209 | 198 |
| ಪ್ರವಾಸೋದ್ಯಮ | 284 | 189 |
| ಯುವಜನ ಸೇವೆಗಳು | 276 | 197 |
| ಆಹಾರ ಮತ್ತು ನಾಗರೀಕ ಸರಬರಾಜು | 8,274 | 6,098 |
| ಕಂದಾಯ | 15,662 | 14,191 |
| ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 1,079 | 393 |
| ಉನ್ನತ ಶಿಕ್ಷಣ | 5,858 | 4,927 |
| ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 34,438 | 32,873 |
| ಕೈಮಗ್ಗ ಮತ್ತು ಜವಳಿ | 499 | 357 |
| ಭಾರಿ ಮತ್ತು ಮಧ್ಯಮ ಕೈಗಾರಿಕೆ | 1,230 | 1,011 |
| ಸಣ್ಣ ಕೈಗಾರಿಕೆ | 757 | 568 |
| ಗಣಿ | 119 | 73 |
| ನಗರಾಭಿವೃದ್ಧಿ | 16,508 | 12,880 |
| ವಸತಿ | 3,129 | 1,521 |
| ಲೋಕೋಪಯೋಗಿ | 9,840 | 7,163 |
| ಭಾರಿ ನೀರಾವರಿ | 18,827 | 9,984 |
| ಸಣ್ಣ ನೀರಾವರಿ | 3,344 | 2,017 |
| ವೈದ್ಯಕೀಯ ಶಿಕ್ಷಣ | 4,987 | 3,850 |
| ಆರೋಗ್ಯ | 12,032 | 8,769 |
| ಕಾರ್ಮಿಕ | 901 | 484 |
| ಕೌಶಲ್ಯ ಅಭಿವೃದ್ಧಿ ಇಲಾಖೆ | 2,377 | 1,671 |
| ಇಂಧನ | 26,896 | 23,897 |
| ಕನ್ನಡ ಮತ್ತು ಸಂಸ್ಕೃತಿ | 275 | 208 |

| ಇಲಾಖೆ | 2025-26ರ ಆಯವ್ಯಯ ಅಂದಾಜು | ದಿನಾಂಕ 09.03.26 ರವರೆಗಿನ ವೆಚ್ಚ |
|---|---|---|
| ಯೋಜನೆ ಇಲಾಖೆ | 3,903 | 2,299 |
| ಕಾನೂನು ಇಲಾಖೆ | 2,537 | 2,078 |
| ಸಂಸದೀಯ ವ್ಯವಹಾರಗಳು | 492 | 388 |
| ಋಣ ಮೇಲುಸ್ತುವಾರಿ | 75,075 | 57,786 |
| **ಒಟ್ಟು** | **4,09,549** | **3,07,662** |